ಓ ಎಸ್.ನಂ. 10:2019 ಪಿ.ಡಬ್ಲ್ಯೂ-1 ಕೃಷ್ಣೇಗೌಡ

ಸಾಕ್ಷಿಗೆ ದಿನಾಂಕಃ 04.08.2023 ರಂದು ಪ್ರಮಾಣ ವಚನ ಮಾಡಿಸಿದೆ:

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎನ್.ಎಂ. ವಕೀಲರಿಂದ**

ದಿನಾಂಕ 22.12.2015 ರಂದು ಪ್ರತಿವಾದಿಗಳು ಕಟ್ಟಡವನ್ನು ಖಾಲಿ ಮಾಡುವ ಬಗ್ಗೆ ನನ್ನ ತಂದೆಗೆ ನೋಟೀಸನ್ನು ಕಳುಹಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ನೋಟೀಸ್ ನನ್ನ ತಂದೆಗೆ ಇದ್ದಾಗಲೇ ಜಾರಿಯಾಗಿತ್ತು ಎಂದು ನನಗೆ ಗೊತ್ತಿಲ್ಲ. ದಿನಾಂಕ 28.02.2016 ರಂದು ದಾವಾ ಸ್ವತ್ತನ್ನು ಖಾಲಿ ಮಾಡಿ ಪ್ರತಿವಾದಿಗಳು ತಮ್ಮ ವ್ಯವಹಾರವನ್ನು ಬೇರೆ ಕಡೆಗೆ ಸ್ಥಳಾಂತರಿಸಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ.

ನನಗೆ ತೋರಿಸಿದ ದಾಖಲಾತಿ ಓಎಸ್ ನಂ.119/2019 ರ ವಾದ ಪತ್ರ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಗಳು ನನ್ನ ಮತ್ತು ನನ್ನ ಸಹೋದರರ ವಿರುದ್ದ 3,62,160/- ರೂಪಾಯಿ ವಸೂಲಾತಿಗಾಗಿ ಮೇಲೆ ಹೇಳಿದ ದಾವೆಯನ್ನು ಹೂಡಿದ್ದಾರೆ ಎಂದರೆ ಸರಿ. ನಾನು ದಾವೆಯಲ್ಲಿ ಕೇಳಿದ ಪರಿಹಾರಕ್ಕೆ ಅರ್ಹನಲ್ಲ ಎಂದರೆ ಸರಿಯಲ್ಲ. ಯಾವ ಕಾರಣಕ್ಕಾಗಿ 2019 ರ ವರೆಗೆ ಯಾವುದೇ ದಾವೆಯನ್ನು ಹೂಡಿರುವುದಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿ ನಾವು ಪ್ರತಿವಾದಿಗಳಿಗೆ ಕೇಳಿದಾಗ ಅವರು ಬಗೆಹರಿಸಿಕೊಳ್ಳುವುದಾಗಿ ಹೇಳುತ್ತಿದ್ದರು, ಅವರು ನಮಗೆ ದಾವಾ ಸ್ವತ್ತಿನ ಬೀಗವನ್ನು ನೀಡಿರಲಿಲ್ಲ ಮತ್ತು ಸ್ಟ್ರಾಂಗ್ ರೂಮನ್ನು ತೆರವುಗೊಳಿಸಿರಲಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆಗೆ ಪ್ರತಿವಾದಿಗಳು ದಾವಾ ಸ್ವತ್ತಿನ ಬೀಗವನ್ನು ನೀಡಿದ್ದರು ಎಂದರೆ ಸರಿಯಲ್ಲ. ಸದರಿ ವಿಚಾರ ನನಗೆ ಮತ್ತು ಉಳಿದ ವಾದಿಗಳಿಗೆ ತಿಳಿದಿದೆ ಎಂದರೆ ಸರಿಯಲ್ಲ. ದಿನಾಂಕ 28.08.2018 ರಂದು ಪ್ರತಿವಾದಿಗಳು ನಮಗೆ ಮುಂಗಡ ಹಣವನ್ನು ವಾಪಸ್ ನೀಡುವಂತೆ ಕೇಳಿದ ಕಾರಣ ನಾವುಗಳು ಪ್ರಸ್ತುತ ದಾವೆಯನ್ನು ಹೂಡಿದ್ದೇವೆ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ದಾವಾ ಸ್ವತ್ತನ್ನು ಖಾಲಿ ಮಾಡುವಂತೆ ನೋಟೀಸನ್ನು ನೀಡಿದ್ದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ನಾವು ದಾವೆಯನ್ನು ಹೂಡಿದ್ದೇವೆ ಎಂದು ನುಡಿಯುತ್ತಾರೆ. ಪ್ರತಿವಾದಿಗಳು ದಾವಾ ಸ್ವತ್ತನ್ನು ಖಾಲಿ ಮಾಡಿರುವ ಕಾರಣ ಮತ್ತು ದಾವಾ ಸ್ವತ್ತು ನಮ್ಮ ಸ್ವಾಧೀನದಲ್ಲಿ ಇರುವ ಕಾರಣ ನಾನು ದಾವೆಯಲ್ಲಿ ಕೇಳಿದ ಪರಿಹಾರಕ್ಕೆ ಅರ್ಹನಲ್ಲ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ</u>** ಇಲ್ಲ.

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

ಸಾಕ್ಷಿಗೆ ಓದಿ ಹೇಳಿ ಕೇಳಿ ಸರಿ ಇದೆ.

**(ಶಮೀರ್.ಪಿ.ನಂದ್ಯಾಲ್)**

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಕೆ.ಆರ್.ಪೇಟೆ.